ಸುದ್ದಿ ಸಿಂಚನ

ಕಾಡಾನೆಗಳ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಶೃಂಗೇರಿ: ಕೆರೆಪಂಚಾಯಿತಿ ಗ್ರಾಮಗಳಲ್ಲಿ ಮತ್ತೆ ಕಾಡಾನೆಗಳು ಪ್ರತ್ಯಕ್ಷವಾಗಿದ್ದು ಗ್ರಾಮಸ್ಥರಲ್ಲಿ ಆತಂಕ ಹುಟ್ಟಿಸಿದೆ.ವಡ್ಡಿನಕಾರ್ಕಿ ಬಳಿ ರೈತರ ಜಮೀನೊಂದರಲ್ಲಿ ಗಿಡಗಳನ್ನು ಹಾನಿಗೊಳಿಸಿದೆ. ಈ ಹಿಂದೆ ಕೆರೆಗೆದ್ದೆಯಲ್ಲಿ ಇಬ್ಬರನ್ನು ತುಳಿದು ಕೊಂದು ಹಾಕಿದ ಘಟನೆ ನಡೆದಿತ್ತು. ದುಬಾರೆ ಆನೆ ಬಿಡಾರದಿಂದ ಆನೆಗಳನ್ನು ತಂದು ಕಾರ್ಯಾಚರಣೆ ನಡೆಸಿತ್ತು. ಮತ್ತೆ ಶೀರ್ಲು ಸುತ್ತ ಕಾಡಾನೆಗಳ ಓಡಾಟ ಕಂಡುಬಂದಿತು. ಘಟನೆ ಮಾಸುವ ಮುನ್ನವೇ ಮತ್ತೆ ಕಾಡಾನೆಗಳ ಓಡಾಟ ಜನರಲ್ಲಿ ಭಯ ಹುಟ್ಟಿಸಿದೆ. ಒಂಟಿ ಮನೆಗಳು,ಕಾಡು ದಾರಿಗಳ ನಡುವೆ ಓಡಾಡಿ ಜೀವಭಯದಲ್ಲಿ ಬದುಕುತ್ತಿರುವ ಈ ಭಾಗದ ಗ್ರಾಮಸ್ಥರಲ್ಲಿ ಅಲ್ಲಲ್ಲಿ ಕಾಡಾನೆಗಳು ಪ್ರತ್ಯಕ್ಷವಾಗು ತ್ತಿರುವುದರಿಂದ ಆತಂಕದ ಛಾಯೆ ಮೂಡಿಸುತ್ತಿದೆ.

ನಾಳೆ ಪೊಲೀಸ್ ಹುತಾತ್ಮ ಅಧಿಕಾರಿಗಳ ದಿನಾಚರಣೆ

ಚಿಕ್ಕಮಗಳೂರು:ಹುತಾತ್ಮ ಪೊಲೀಸ್ ಅಧಿಕಾರಿಗಳ ಸ್ಮರಣೆಗೆ 21ಕ್ಕೆ ಬೆ.8 ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಹುತಾತ್ಮರ ಸ್ಮಾರಕ, ರಾಮನಹಳ್ಳಿಯಲ್ಲಿ ನಡೆಯಲಿದೆ. ಅರಣ್ಯ ಸಂರಕ್ಷಣಾಧಿಕಾರಿ ಯಶ್ ಪಾಲ್ ಕ್ಷೀರಸಾಗರ್‌ಮುಖ್ಯ ಅತಿಥಿಗಳಾಗಿ, ಡಿಸಿ ಭಂವರ್‌ಸಿಂಗ್ ಮೀನಾ, ಕ್ಷೇತ್ರ ನಿರ್ದೇಶಕ ಪುಲ್ಕಿತ್ ಮೀನಾ, ಚಿಕ್ಕಮಗಳೂರು ಉಪ ಅರಣ್ಯ ಸಂರಕ್ಷಣಾಧಿ ಕಾರಿ, ಕೆ. ಟಿ. ಬೋರಯ್ಯ ಪಾಲ್ಗೊಳ್ಳಲಿದ್ದಾರೆ.

ರೈತರಿಗೆ 10 ಎಚ್‌ಪಿ ವಿದ್ಯುತ್ ನೀಡಿದ್ದು ಬಿಎಸ್‌ವೈ

ಸಂಸದ ಬಿ.ವೈ.ರಾಘವೇಂದ್ರ ನುಡಿ | ಕಾಂಗ್ರೆಸ್ ಮುಖಂಡ ಕಡ್ಲೇರ್ ರುದ್ರಪ್ಪ ಬೆಂಬಲಿಗರೊಂದಿಗೆ ಬಿಜೆಪಿ ಸೇರ್ಪಡೆ

• **ಕನ್ನಡಪ್ರಭ ವಾರ್ತೆ** ಆನವಟ್ಟಿ

ರೈತರ ಹಿತದೃಷ್ಟಿಯಿಂದ 10 ಎಚ್‌ಪಿವರೆಗೆ ಉಚಿತ ವಿದ್ಯುತ್ ಸೌಲಭ್ಯ ಮುಂದುವರಿಸಿದವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಸೋಮವಾರ ಹುಣಸವಳ್ಳಿಯಿಂದ ಕಮನವಳ್ಳಿ ವರೆಗೆ ಬೃಹತ್ ಬೈಕ್ ರ್‍ಯಾಲಿ ನಡೆಸಿ, ಕಮನವಳ್ಳಿಯ ಪ್ರಭಾವಿ ಮುಖಂಡ ಕಡ್ಲೇರ್‌ರುದ್ರಪ್ಪ ಅವರಿಗೆ ಬಿಜೆಪಿ ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರ ಆಡಳಿತಾವಧಿಯಲ್ಲಿರೈತರಿಗೆ5 ಎಚ್‌ಪಿವರೆಗೆಉಚಿತ ವಿದ್ಯುತ್‌ನೀಡುವಯೋಜನೆಜಾರಿಯಲ್ಲಿತ್ತು. ಅವರ ನಂತರಅಧಿಕಾರಕ್ಕೆಬಂದಇಬ್ಬರುಮುಖ್ಯಮಂತ್ರಿಗಳು ಈ ಯೋಜನೆಯನ್ನು ರದ್ದುಗೊಳಿಸಿದ್ದರು. ಬಳಿಕ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದಾಗರೈತರಅನುಕೂಲಕ್ಕಾಗಿ10ಎಚ್‌ಪಿ ವರೆಗೆಉಚಿತವಿದ್ಯುತ್‌ಸೌಲಭ್ಯ ಮುಂದುವರಿಸಿದರು ಎಂದು ತಿಳಿಸಿದರು. ಡಿ.ಕೆ. ಶಿವಕುಮಾರ್‌ನೇತೃತ್ವದ ಸರ್ಕಾರ 35 ಸಾವಿರ ರು. ಕೋಟಿ ಮೊತ್ತದ ಹೊಸ ಯೋಜನೆಗಳನ್ನು ಘೋಷಿಸಿದೆ. ಆದರೆ, ಈ ಹಿಂದೆ ಕೈಗೊಂಡ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ಹಣ ಪಾವತಿಸಬೇಕು. ಚುನಾವಣೆ ದೃಷ್ಟಿಯಿಂದ ಸುಳ್ಳು ಪ್ರಚಾರ ಮಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ರೈತರಿಗೆಶೂನ್ಯ ಬಡ್ಡಿದರದಲ್ಲಿಸಾಲ, ವಿವಿಧನೀರಾವರಿ ಯೋಜನೆಗಳು, ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆಹಾಗೂಹೆಣ್ಣುಮಕ್ಕಳಿಗೆಭಾಗ್ಯಲಕ್ಷ್ಮಿ ಬಾಂಡ್ ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಯಡಿಯೂರಪ್ಪ ಮತ್ತು ಪ್ರಧಾನಿ ಮೋದಿ ಅವರು ಆಡಳಿತ ನಡೆಸಿದ್ದಾರೆ. ಇಂತಹ ನಾಯಕರ ಬಗ್ಗೆ ಕಾಂಗ್ರೆಸ್ ಮುಖಂಡರು ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದರು.



ಬೃಹತ್ ಬೈಕ್ ರ್‍ಯಾಲಿ ನಂತರ ಪ್ರಭಾವಿ ಮುಖಂಡ ಕಡ್ಲೆ ರುದ್ರಪ್ಪ ಅವರನ್ನು ಪಕ್ಷದ ಬಾವುಟ ನೀಡುವುದರ ಮೂಲಕ ಬಿಜೆಪಿ ಪಕ್ಷಕ್ಕೆ ಸಂಸದ ಬಿ.ವೈ.ರಾಘವೇಂದ್ರ ಸೇರ್ಪಡೆ ಮಾಡಿಕೊಂಡರು.

ಅಹಂಕಾರದ ಮಾತು ಬಿಡಿ: ಜಿಲ್ಲಾ ಉಸ್ತುವಾರಿ ಸಚಿವರು ಅಹಂಕಾರದ ಮಾತುಗಳನ್ನು ಬಿಟ್ಟು ಅಭಿವೃದ್ಧಿಕಾರ್ಯಗಳನ್ನುಮಾಡಿತೋರಿಸಲಿಎಂದು ಸವಾಲು ಹಾಕಿದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದಾಗಲೆಲ್ಲಸೊರಬ ಕ್ಷೇತ್ರದಿಂದ ಬಿಜೆಪಿಗೆ ಶಾಸಕರನ್ನು ನೀಡಲಾಗಿದೆ. ಕಳೆದ ಚುನಾವಣೆಯಲ್ಲಿನಮ್ಮದೇ ತಪ್ಪುಗಳಿಂದ ಕ್ಷೇತ್ರವನ್ನು ಕಳೆದುಕೊಂಡಿದ್ದೇವೆ. ಮುಂದಿನ ಚುನಾವಣೆಯಲ್ಲಿ ಆತಪ್ಪುಗಳನ್ನುಪುನರಾವರ್ತಿಸುವುದಿಲ್ಲ.ಮತದಾರರ ಭಾವನೆಗಳಿಗೆ ತಕ್ಕಂತೆ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸೊರಬ ಕ್ಷೇತ್ರವನ್ನು ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೈಲಿಗೆ ಕಳಿಸಿದ್ದು ಮರೆತಿಲ್ಲ: ಹಾಲಪ್ಪ ಮಾಜಿ ಸಚಿವ ಹರತಾಳು ಹಾಲಪ್ಪ ಮಾತನಾಡಿ, ಸ್ಟಿಂಗ್ ಆಪರೇಷನ್ ಮೊದಲ ನಾಯಕ ಮಧು ಬಂಗಾರಪ್ಪ, ಮೊದಲ ಬಲಿಪಶು ನಾನೇ ಎಂದು ಲೇವಡಿ ಮಾಡಿದರು. ರಾಜಕೀಯವಾಗಿ ನನ್ನನ್ನು ಹತ್ತಿಕ್ಕುವ ಉದ್ದೇಶದಿಂದ ಷಡ್ಯಂತ್ರ ನಡೆಸಿ ಜೈಲಿಗೆ ಕಳುಹಿಸಲಾಗಿತ್ತು. ಆ ಘಟನೆಯನ್ನು ನಾನು ಮರೆತಿಲ್ಲ ಎಂದರು.

192 ಬಾರಿ ಪ್ರಕರಣಗಳು ದಾಖಲಾಗಿದ್ದ ವ್ಯಕ್ತಿಯ ಮನೆಗೆ ಬಂಗಾರಪ್ಪ ಅವರ ಹೆಸರನ್ನು ಬಳಸಿಕೊಂಡು ಮಧು ಬಂಗಾರಪ್ಪ ಕರೆ ಮಾಡಿದ್ದರು. ಆ ಪೈಕಿ ಒಂದು ಕರೆ 54 ನಿಮಿಷಗಳ ಕಾಲ ಸಂಭಾಷಣೆ ನಡೆದಿತ್ತು ಎಂದು ಆರೋಪಿಸಿದರು.

ನಾನು ಮತ್ತು ಸಂಸದ ಬಿ.ವೈ. ರಾಘವೇಂದ್ರ ಅವರು ಒಟ್ಟಾಗಿ ಮುಂದಿನ ಚುನಾವಣೆಯಲ್ಲಿ ಸೊರಬ ಕ್ಷೇತ್ರವನ್ನು ಗೆಲ್ಲುತ್ತೇವೆ ಎಂದರು.

ಮಾಜಿ ಸಚಿವ ಬಿ.ಸಿ. ಪಾಟೀಲ್, ಸ್ಟಿಂಗ್ ಆಪರೇಷನ್ ಮೂಲಕ ಅವಮಾನಿಸಿದವರ ವಿರುದ್ಧ ಹರತಾಳು ಹಾಲಪ್ಪ ಅವರೇ ಸೊರಬ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು ವಿಧಾನಸಭೆಗೆ ಬರಬೇಕು ಎಂಬುದು ನನ್ನ ಆಶಯ ಎಂದು ತಿಳಿಸಿದರು.

ಡಿ.ಕೆ. ಶಿವಕುಮಾರ್‌ಅವರು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿರುವುದರಿಂದ ರಾಜ್ಯದಲ್ಲಿ ಆಡಳಿತ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಆರೋಪಿಸಿದಅವರು,ಸ್ಟಿಂಗ್‌ಆಪರೇಷನ್‌ಹೆಸರಿನಲ್ಲಿ ಎಂಟು ವರ್ಷ ಬಡವರ ಪರ ಆಡಳಿತ ನೀಡಿದ ಸಿದ್ದರಾಮಯ್ಯ ಅವರ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ನಡೆಯುತ್ತಿದೆ ಎಂದ ಅವರು 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಭರವಸೆ ವ್ಯಕ್ತಪಡಿಸಿದರು.

165 ಬೆಂಬಲಿಗರೊಂದಿಗೆ ಸೇರ್ಪಡೆ: ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕಡ್ಲೇರ್‌ರುದ್ರಪ್ಪಕಮಲ ಮಾತನಾಡಿ, ಕಳೆದ 40 ವರ್ಷಗಳಿಂದ ಬಂಗಾರಪ್ಪ ಕುಟುಂಬದೊಂದಿಗೆ ರಾಜಕೀಯವಾಗಿ ಗುರುತಿಸಿಕೊಂಡಿದ್ದೇನೆ. ದೀರ್ಘಕಾಲದಪ್ರಾಮಾಣಿಕ ರಾಜಕಾರಣದ ನಡುವೆಯೂ ಮಧು ಬಂಗಾರಪ್ಪ ಅವರು ನನ್ನ ಬಗ್ಗೆ ತಿರಸ್ಕಾರದ ಮನೋಭಾವ ತೋರಿಸಿದ್ದಾರೆ ಎಂದು ಆರೋಪಿಸಿದರು.

ನಾನು ಮನೆಗೆ ಬಂದರೆ ಗೇಟ್‌ನಿಂದ ಹೊರಗೆ ನಿಲ್ಲಿಸಿ ಎಂಬ ರೀತಿಯಲ್ಲಿ ಅವಮಾನಕರವಾಗಿ ಮಾತನಾಡಿದ್ದರು. ಕೆಲವು ವಿಚಾರಗಳಲ್ಲಿ ಜನರಿಗೆ ನ್ಯಾಯ ಒದಗಿಸುವ ಬದಲು ನಿರ್ಲಕ್ಷ್ಯ ತೋರಿದ್ದಾರೆ. ಬಿಜೆಪಿ ನಾಯಕರು ಪಕ್ಷಕ್ಕೆ ಆಹ್ವಾನಿಸಿದ ಬಳಿಕವೂ ವಿಶ್ವಾಸದಿಂದ 10 ತಿಂಗಳು ಕಾದಿದ್ದೆ. ಆದರೆ, ಮಧು ಬಂಗಾರಪ್ಪ ಅವರು ಕ್ಷೇತ್ರದ ಕಡೆ ಗಮನ ಹರಿಸಲಿಲ್ಲ. ಹೀಗಾಗಿ, ಇಂದು ತಾಲೂಕು ಪಂಚಾಯತಿ ಮಾಜಿ ಸದಸ್ಯ ಮಂಜಪ್ಪ ಉದ್ರಿ, ಟಿ.ಹನುಮಂತಪ್ಪ, ಆಂಜನೇಯ ಸುರೇಶ್ ಶಿವಲಿಂಗ ಸೇರಿದಂತೆ 165 ಬೆಂಬಲಿಗರೊಂದಿಗೆ ಬಿಜೆಪಿ ಸೇರ್ಪಡೆಯಾಗಿದ್ದೇನೆ ಎಂದು ತಿಳಿಸಿದರು. ಬಿಜೆಪಿ ನಾಯಕರ ಅಭಿವೃದ್ಧಿ ಕಾರ್ಯಗಳು ಹಾಗೂ ಪಕ್ಷದ ಸಿದ್ಧಾಂತವನ್ನು ಮೆಚ್ಚಿ ಈ ನಿರ್ಧಾರ ಕೈಗೊಂಡಿದ್ದೇನೆ ಎಂದರು.

ಪಕ್ಷಕ್ಕೆ ಸೇರ್ಪಡೆ ಸಮಾರಂಭದಲ್ಲಿ ಬಿಜೆಪಿ ಶಾಸಕ ಡಿಎಸ್‌ಅರುಣ್,ಮಾಜಿಶಾಸಕಆರ್.ಕೆಸಿದ್ರಾಮಣ್ಣ, ಜಿಲ್ಲಾ, ಎಂ.ಕೆ. ಜಗದೀಶ್, ಪಕ್ಷದ ಮುಖಂಡರಾದ ಪದ್ಮನಾಭ ಭಟ್, ಹರಿಕೃಷ್ಣ, ಮಾಲತೇಶ್, ಮೇಘರಾಜ್, ಪ್ರಕಾಶ್ ಅಗಸನಹಳ್ಳಿ, ರಾಜು ತಲ್ಲೂರ್,ವೈದ್ಯಜ್ಞಾನೇಶ್,ರಾಜುಗೌಡಹಿರೇಚೌಟಿ, ಮಲ್ಲಿಕಾರ್ಜುನ ಗುತ್ತೇರ್, ಹೊನ್ನಪ್ಪ ಎಣ್ಣೆಕೊಪ್ಪ, ಮಂಜಪ್ಪಹಿತ್ಲಮನಿ, ಗೀತಾ ಮಲ್ಲಿಕಾರ್ಜುನ, ಸುಧಾ ಶಿವಪ್ರಸಾದ್, ಜಾನಕಪ್ಪ, ಸುರೇಶ್ ಉದ್ರಿ ಇದ್ದರು.


ಅನ್ಯಕೋಮು ವ್ಯಕ್ತಿಗಳ ಬೆದರಿಕೆ ಕರೆ: ದೂರು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್ ಅವರಿಗೆ ಮಾಜಿ ಡಿಸಿಎಂ ಈಶ್ವರಪ್ಪ ದೂರು

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಇಬ್ಬರು ಅನ್ಯಕೋಮಿನ ವ್ಯಕ್ತಿಗಳಿಂದ ನನಗೆ ಕರೆ ಬಂದಿದ್ದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಿ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್ ಅವರಿಗೆ ದೂರು ಸಲ್ಲಿಸಿದರು.

ಅ.17 ರಂದು ರಾತ್ರಿ 8.49ಕ್ಕೆರಿಜ್ವಾನ್ ಬೇಗ್ ಎಂಬ ವ್ಯಕ್ತಿ 7019994981 ಸಂಖ್ಯೆಯಿಂದ ಬೆದರಿಕೆ ಕರೆ ಬಂದಿದ್ದು, ಅಂದೇ ದಿನ ರಾತ್ರಿ 10.49 ರಂದು ಸಮಯದಲ್ಲಿಡಿಜಿಟಲ್‌ಫರಾನ್‌ರಶೀದ್ ಎಂಬವ್ಯಕ್ತಿ 9823658527 ಸಂಖ್ಯೆಯಿಂದ ಕರೆ ಮಾಡಿ ವೈಯಕ್ತಿಕವಾಗಿ ನಿಂದಿಸಿ ಜೀವ ಬೆದರಿಕೆ ಒಡ್ಡಿದ್ದಾರೆ. ಇದರಿಂದ ನನಗೆ ಮತ್ತು ನನ್ನ ಕುಟುಂಬಕ್ಕೆ ಬಹಳ ತೊಂದರೆಯಾಗಿದೆ. ಇಂತಹ ದುಷ್ಟ ವ್ಯಕ್ತಿಗಳನ್ನು ಗುರುತಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ನನಗೆ ಸೂಕ್ತ ಭದ್ರತೆ ಒದಗಿಸಬೇಕೆಂದು ಕೆ.ಎಸ್. ಈಶ್ವರಪ್ಪ ಅವರು ರಾಷ್ಟ್ರಭಕ್ತ ಬಳಗದವರ ಜೊತೆ ಸೇರಿ ಎಸ್‌ಪಿಗೆ ಮನವಿ ಸಲ್ಲಿಸಿದರು.



ಸಿನಿಮಾ ನೋಡುತ್ತಿದ್ದಾಗ ಕರೆ ಬಂದವು: ಎಸ್ಪಿಗೆ ದೂರುನೀಡಿದಬಳಿಕಮಾತನಾಡಿದಕೆ.ಎಸ್.ಈಶ್ವರಪ್ಪ ಅವರು, ನಾನು ಕುಟುಂಬದವರ ಜೊತೆ ಚಿತ್ರಮಂದಿರದಲ್ಲಿಸಿನಿಮಾವೀಕ್ಷಿಸುತ್ತಿದ್ದಾಗಮೊದಲು 7019994981 ನಂಬರ್‌ನಿಂದ ಕರೆ ಬಂತು. ಕರೆ ಮಾಡಿದ ವ್ಯಕ್ತಿ 'ನೀನು ಈಶ್ವರಪ್ಪನೇ, ಮಾಜಿ ಡಿಸಿಎಂ ಅವರಾ' ಎಂದು ಕೇಳಿದ. ಹೌದು ನಾನು ಈಶ್ವರಪ್ಪ ಮಾತನಾಡುತ್ತಿರುವುದು ಅಂದೆ. ಆಗ ಆತ ನನ್ನನ್ನು ನಿಂದಿಸಲು ಶುರು ಮಾಡಿದ. ನನಗೆ ಅದು ಸರಿಯಾಗಿ ಕೇಳುತ್ತಿರಲಿಲ್ಲ. ಆಗನಾನು, ಚಿತ್ರಮಂದಿರದಲ್ಲಿದ್ದೇನೆ. ಆಮೇಲೆಕರೆಮಾಡಿಎಂದೆ. ಆದರೂಆತಬಿಟ್ಟೂಬಿಡದೆ ಬೈಯುತ್ತಾ ಕರೆ ಕಟ್ ಮಾಡಿದ. ನಂತರ ಆತ ಮತ್ತೆ ಕರೆ ಮಾಡಲಿಲ್ಲ ಎಂದು ತಿಳಿಸಿದ್ದಾರೆ. ಇದಾದ 2 ಗಂಟೆ ಬಳಿಕ ಮತ್ತೊಬ್ಬ 9823658527 ನಂಬರ್‌ನಿಂದ ಕರೆ ಮಾಡಿ, ನೀವು ಈಶ್ವರಪ್ಪನವರೇ? ಎಂದು ಕೇಳಿದ. ನೀವು ಜಮೀರ್‌ಅಹಮದ್ ಅವರ ಬಗ್ಗೆ ಏನೇನು ಮಾತನಾಡಿದ್ದೀರಿ, ನಾನುನಿಮಗೆದಾಖಲೆಕೊಡುತ್ತೇನೆ ಎಂದ. ನಾನು ಕೊಡಿ ಎಂದೆ. ಆಗ ಆತ ಕೂಡ ಫೋನ್ ಕಟ್ ಮಾಡಿದ. ಇಲ್ಲಿ ಇಬ್ಬರು ಸಹ ನನಗೆ ಒಂದು ರೀತಿ ಬೆದರಿಕೆ ಹಾಕುವ ರೀತಿಯಲ್ಲಿ ಮಾತನಾಡಿದ್ದಾರೆ. ಇದರಿಂದ ತಕ್ಷಣ ಇಬ್ಬರನ್ನು ಗುರುತಿಸಿ ಬಂಧಿಸಬೇಕು ಎಂದು ಆಗ್ರಹಿಸಿದರು.

ಆರೋಪಿಗಳನ್ನು ಬಂಧಿಸಲು ಆಗ್ರಹ: ನನಗೆ ಈ ಹಿಂದೆಯೂ ಬೆದರಿಕೆ ಬಂದಿವೆ. ಆಗಲೂ ಸಹ ನಾನು ಮನವಿ ಮಾಡಿಕೊಂಡಿದ್ದೆ. ಆದರೆ, ಈವರೆಗೂ ಆರೋಪಿಗಳನ್ನು ಹಿಡಿದಿಲ್ಲ. ಈಗಲಾದರೂ ಆರೋಪಿಗಳನ್ನು ಬಂಧಿಸಬೇಕು ಎಂದರು. ಭದ್ರತೆ ಬಗ್ಗೆ ನಾನು ಕೇಳಲ್ಲ. ಹಿಂದೆಯೇ ನಾನು ಕೇಳಿದ್ದೆ. ನಾನು ಪದೇ ಪದೆ ಭದ್ರತೆ ಕೇಳಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜನೌಷಧಿಯಿಂದ ಖಾಸಗಿ ಔಷಧಿ ಅಂಗಡಿಗಳಿಗೆ ಹೊಡೆತ

ಜಿಲ್ಲಾ ಔಷಧಿ ವ್ಯಾಪಾರಿ ಸಂಘದ ಮಧುಕರ್ ಆತಂಕ | ಔಷಧಿ ವ್ಯಾಪಾರಿಗಳ ಸಂಘದ 27ನೇ ಮಾಸಿಕ ಸಭೆ

• **ಕನ್ನಡಪ್ರಭ ವಾರ್ತೆ** ಹೊಸನಗರ

ಇಂದಿನ ಆಧುನಿಕ ಯುಗದಲ್ಲಿ ಔಷಧಿ ವ್ಯಾಪಾರಿಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಜನೌಷಧಿ ಕೇಂದ್ರಗಳಲ್ಲಿ ಕಡಿಮೆ ದರದಲ್ಲಿ ಔಷಧಿಗಳನ್ನು ಮಾರಾಟ ಮಾಡುತ್ತಿರುವುದರಿಂದ ಖಾಸಗಿ ಔಷಧಿ ಅಂಗಡಿಗಳವ್ಯಾಪಾರದಮೇಲೆಪರಿಣಾಮಬೀರುತ್ತಿದೆ ಎಂದು ಶಿವಮೊಗ್ಗ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎಸ್.ಪಿ. ಮಧುಕರ್‌ಹೇಳಿದರು.

ಇಲ್ಲಿನ ಗಾಯತ್ರಿ ಮಂದಿರದ ಆವರಣದಲ್ಲಿ ನಡೆದ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ 27ನೇ ಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ಔಷಧಿ ಅಂಗಡಿಗಳನ್ನು ನಡೆಸುವುದು ದಿನದಿಂದ ದಿನಕ್ಕೆಕಷ್ಟಕರವಾಗುತ್ತಿದೆ. ಆದರೂಶಿವಮೊಗ್ಗಜಿಲ್ಲೆಯ ಯಾವುದೇ ಔಷಧಿ ವ್ಯಾಪಾರಿಗೆ ತೊಂದರೆಯಾದರೆ, ಜಿಲ್ಲಾ ಸಂಘವು ಅವರ ಪರವಾಗಿ ನಿಂತು ನೆರವು ನೀಡಲಿದೆ. ಸಂಘದ ಸದಸ್ಯರು ಪರಸ್ಪರ ಒಗ್ಗಟ್ಟಿನಿಂದ ಇರಬೇಕು. ನಮ್ಮೊಳಗೆಭಿನ್ನಾಭಿಪ್ರಾಯಗಳಿಗೆಅವಕಾಶ ನೀಡದೆ, ಎಲ್ಲರೂ ಒಂದಾಗಿಸಂಘವನ್ನು ಬಲಿಷ್ಠಗೊಳಿಸಬೇಕು. ಸರ್ಕಾರದ ಮುಂದೆ ನಮ್ಮ ಬೇಡಿಕೆಗಳನ್ನು ಮಂಡಿಸಿ ಅವುಗಳನ್ನು ಈಡೇರಿಸಿ ಕೊಳ್ಳಲು ಪ್ರಯತ್ನಿಸಬೇಕು ಎಂದು ತಿಳಿಸಿದರು. ಜಿಲ್ಲಾ ಸಂಘದ ಉಪಾಧ್ಯಕ್ಷ ಎನ್.ದತ್ತಾತ್ರೇಯ ಉಡುಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಘದ ಕಾರ್ಯಚಟುವಟಿಕೆಗಳಲ್ಲಿ ಜಿಲ್ಲೆಯ ಎಲ್ಲ ಸದಸ್ಯರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸಂಘವು ಮಾಡುತ್ತಿರುವ ಕಾರ್ಯಗಳ ಬಗ್ಗೆ ಎಲ್ಲರೂ ಅರಿತುಕೊಳ್ಳಬೇಕು. ಮುಂದಿನ ಸಭೆಗಳಿಗೆ ಜಿಲ್ಲೆಯ ಎಲ್ಲ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ವಿಶ್ವಾಸವಿದೆ ಎಂದರು. ಸಭೆಯಲ್ಲಿ 53 ವರ್ಷಗಳ ಕಾಲ ಸಂಘದ ಬೆಳವಣಿಗೆಗೆ ಶ್ರಮಿಸಿದ ಎಚ್.ಎಸ್. ಮಾಧವರಾವ್, ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಎಸ್. ನಾಗರಾಜ್, ಪತ್ರಕರ್ತ ಕೆ ಸಿ ಬಸವರಾಜ್, ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮಧುಕರ್, ಉಪಾಧ್ಯಕ್ಷ ಎನ್. ದತ್ತಾತ್ರೇಯ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಂಘದ ಕಾರ್ಯದರ್ಶಿ ವೆಂಕಟೇಶ್ ಡಿ.ಜಿ., ಸಹ ಕಾರ್ಯದರ್ಶಿ ಎಂ.ಎಲ್. ಮಂಜುನಾಥ್, ಖಜಾಂಚಿ ನಾಗರಾಜ್ ಕೆ.ಸಿ., ನಿಕಟಪೂರ್ವ ಅಧ್ಯಕ್ಷರಾದ ಶಂಕರ್, ಎಚ್. ಮಹಮದ್ ಕಾಸಿಮ್, ವಿವೇಕಾನಂದ ನಾಯಕ, ನಿಕಟಪೂರ್ವ ಕಾರ್ಯದರ್ಶಿ ಚಂದ್ರಶೇಖರ್‌ಎನ್., ರುದ್ರಪ್ರಸಾದ್, ಕೆ.ಎಂ. ಜಗದೀಶ್, ಓಂಕಾರಪ್ಪ, ಜಯರಾಜ್ ಕಾಮತ್, ಸತೀಶ್ ಎಸ್. ಆರ್., ಪ್ರಕಾಶ್ ಬಿಲಾವಡಿ, ವಿನಾಯಕಸ್ವಾಮಿ, ಮುತ್ತಣ್ಣ, ಕಾಡುವಳ್ಳಿ ವಿನಯ್‌ಕುಮಾರ್, ರಘುನಾಥ್ ಕೊಣಂದೂರು ಉಪಸ್ಥಿತರಿದ್ದರು.



ತ್ಯಾಗರ್ತಿ ಸಹಕಾರಿ ಸಂಘಕ್ಕೆ ಹಾಲುಗದ್ದೆ ಮಂಜುನಾಥ್‌ಅಧ್ಯಕ್ಷ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ತ್ಯಾಗರ್ತಿಯ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಹಾಲುಗದ್ದೆ ಮಂಜುನಾಥ್ ಅವಿರೋಧ ಆಯ್ಕೆಯಾಗಿದ್ದಾರೆ. ತ್ಯಾಗರ್ತಿ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಗಿದ್ದ ಅಮೃತ್ ರಾಜ್ ಹೊಸಂತೆ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣಾ ದಿನಾಂಕ ಪ್ರಕಟವಾಗಿದ್ದು ಹಾಲುಗದ್ದೆ ಮಂಜು ನಾಥ್ ಒಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾದ ಸಂಘದ ಸಿಇಒ ಜೈಕುಮಾರ್ ಘೋಷಿಸಿದರು. ನೂತನ ಅಧ್ಯಕ್ಷರು ಸಂಘದ ಅಭಿವೃದ್ಧಿಯೊಂದಿಗೆ ರೈತರ ಸಂಕಷ್ಟಕ್ಕೂ ಸ್ಪಂದಿಸುವುದಾಗಿ ಹೇಳಿದರು. ರೈತರು ಈ ಸೇವಾ ಸಹಕಾರ ಸಂಘದಲ್ಲಿಯೇ ವ್ಯವಹರಿಸುವಂತೆ ಸಂಘದ ಸಿಬ್ಬಂದಿ ರೈತರೊಂದಿಗೆ ಸ್ನೇಹಪೂರ್ವಕ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಉಪಾಧ್ಯಕ್ಷ ಚಂದ್ರಕಲಾ ಶಿವು, ನಿಕಟಪೂರ್ವಅಧ್ಯಕ್ಷ ಅಮೃತ್‌ರಾಜ್ ಹೊಸಂತೆ, ನಿರ್ದೇಶಕರಾದ ಕಿರಣ್ ದೊಡ್ಮನೆ, ಗಣಪತಿ ಎಂ.ಎಲ್, ಲಿಂಗರಾಜ್.ಡಿ.ಕಲ್ಲನ್, ಪರಶುರಾಮ್, ಟಿ.ಕೆ.ಹನುಮಂತಪ್ಪ ಉಪಸ್ಥಿತರಿದ್ದರು.



ಸನ್ಮಾನ | ರಂಗಕರ್ಮಿ ಲಕ್ಷ್ಮೀನಾರಾಯಣ ರಾವ್ ಅಭಿಪ್ರಾಯ | ರಂಗದಸರಾ ಸಮಾರೋಪ

ಕಲಾವಿದರಿಗೆ ನೆರವಿನಿಂದ ರಂಗಚಟುವಟಿಕೆ ನಿರಂತರತೆ ಸಾಧ್ಯ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಕಲಾವಿದರಿಗೆಆರ್ಥಿಕನೆರವುಒದಗಿಸಿ, ಸಾರ್ವಜನಿಕರ ಸಹಭಾಗಿತ್ವ ಹೆಚ್ಚಿಸಿದಾಗ ಮಾತ್ರ ರಂಗಚಟುವಟಿಕೆಗಳನ್ನು ನಿರಂತರವಾಗಿ ಬೆಳೆಸಲು ಸಾಧ್ಯ ಎಂದು ರಂಗಕರ್ಮಿ ಲಕ್ಷ್ಮೀನಾರಾಯಣ ರಾವ್ ಅಭಿಪ್ರಾಯಪಟ್ಟರು.

ಮಹಾನಗರಪಾಲಿಕೆವತಿಯಿಂದಶಿವಮೊಗ್ಗದಸರಾ ಅಂಗವಾಗಿ ನಗರದ ಸುವರ್ಣ ಸಾಂಸ್ಕೃತಿಕ ಭವನದಲ್ಲಿ (ರಂಗಾಯಣ) ಸೋಮವಾರ ಆಯೋಜಿಸಿದ್ದ ರಂಗದಸರಾ ಸಮಾರೋಪದಲ್ಲಿ ಅವರು ಮಾತನಾಡಿದರು.

ಗಣೇಶೋತ್ಸವದ ಮಾದರಿಯಲ್ಲಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಬೆಳೆಸಬೇಕು. ಹಿಂದೆಗ್ರಾಮೀಣ ಪ್ರದೇಶಗಳಲ್ಲಿ ಜನರೇ ಯಕ್ಷಗಾನ ಸೇರಿದಂತೆ ವಿವಿಧ ಕಲಾಪ್ರಕಾರಗಳನ್ನು ಸಂಘಟಿಸುತ್ತಿದ್ದರು. ಈಗ ಕಾರ್ಯಕ್ರಮಗಳ ಆಯೋಜನಾ ವೆಚ್ಚ ಹೆಚ್ಚಾಗಿರುವುದರಿಂದಕಲಾವಿದರಿಗೆಸರ್ಕಾರದನೆರವು ಅಗತ್ಯವಾಗಿದೆ ಎಂದರು.

ಈ ಬಾರಿಯ ರಂಗದಸರಾದಲ್ಲಿ ಮಕ್ಕಳು, ಹಿರಿಯರು, ಕಾಲೇಜು ವಿದ್ಯಾರ್ಥಿಗಳು, ಗ್ರಾಮೀಣ ಕಲಾವಿದರು ಹಾಗೂ ವಕೀಲರು ಸೇರಿದಂತೆ ವಿವಿಧ ಕ್ಷೇತ್ರಗಳವರು ನಾಟಕಗಳಲ್ಲಿ ಭಾಗವಹಿಸಿರುವುದು ಸಂತಸದ ಸಂಗತಿ. ಕಾಡು, ಪ್ರಕೃತಿ, ಜನಜೀವನದ ಸಮಸ್ಯೆಗಳು ಹಾಗೂ ನಕ್ಸಲ್ ಚಟುವಟಿಕೆಗಳಂತಹ ಸಾಮಾಜಿಕ ಸಂಘರ್ಷಗಳನ್ನು ರಂಗಭೂಮಿಯ ಮೂಲಕ ಜನರ ಮುಂದಿಡಬೇಕು ಎಂದು ಹೇಳಿದರು.

ಹವ್ಯಾಸಿ ರಂಗತಂಡಗಳ ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ಹೊನ್ನಾಳಿ ಚಂದ್ರಶೇಖರ ಮಾತನಾಡಿ, 2012ರಲ್ಲಿಆರುನಾಟಕಗಳುಹಾಗೂ60 ಸಾವಿರ ರು. ಬಜೆಟ್‌ನೊಂದಿಗೆ ಆರಂಭವಾದ ರಂಗದಸರಾ ಇಂದು 24 ನಾಟಕಗಳು ಸೇರಿದಂತೆ 39 ಕಾರ್ಯಕ್ರಮಗಳನ್ನು ಆಯೋಜಿಸುವ ಮಟ್ಟಕ್ಕೆ ಬೆಳೆದಿದೆ. ಈ ಬಾರಿ 500ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದು, 15ರಿಂದ 20 ಸಾವಿರ ಜನರನ್ನು ತಲುಪಿದೆ ಎಂದರು. ಶಿವಮೊಗ್ಗ ದಸರೆಗೆ ಸಾಂಸ್ಕೃತಿಕ ಮೆರುಗು ನೀಡುವಲ್ಲಿ ರಂಗದಸರಾ ಪ್ರಮುಖ ಪಾತ್ರ ವಹಿಸಿದೆ. 30ಕ್ಕೂ ಹೆಚ್ಚು ರಂಗತಂಡಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಪ್ರತಿವರ್ಷ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದರು. ಡಾ.ಎ.ಸಿ. ಶೈಲಜಾ ಮಾತನಾಡಿ, ಹೊಸ ಕಲಾವಿದರಿಗೆ ವೇದಿಕೆ ಒದಗಿಸುವುದು ಹಾಗೂ ಹೊಸ ನಾಟಕಗಳ ಸೃಷ್ಟಿಗೆ ಅವಕಾಶ ನೀಡುವುದು ಇದರ ಉದ್ದೇಶವಾಗಿತ್ತು ಎಂದರು. ಸಂಘದ ಅಧ್ಯಕ್ಷ ಕಾಂತೇಶ್, ಮಧು ನಾಯ್ಕ್, ರಂಗಭೂಮಿ ಕಲಾವಿದರಾದ ಹರಿಗೆ ಗೋಪಾಲಸ್ವಾಮಿ, ಜಿ.ಆರ್.ಲವ, ರಂಗನಾಥ ನೀನಾಸಂ, ಸಾಸ್ವೆಹಳ್ಳಿ ಸತೀಶ್ ಇದ್ದರು.



ಶಿವಮೊಗ್ಗದ ಮಹಾನಗರ ಪಾಲಿಕೆ ವತಿಯಿಂದ ಶಿವಮೊಗ್ಗ ದಸರಾ ಅಂಗವಾಗಿ ನಗರದ ಸುವರ್ಣ ಸಾಂಸ್ಕೃತಿಕ ಭವನದಲ್ಲಿ (ರಂಗಾಯಣ) ಸೋಮವಾರ ಆಯೋಜಿಸಿದ್ದ ರಂಗದಸರಾ ಸಮಾರೋಪದಲ್ಲಿ ರಂಗಕರ್ಮಿ ಲಕ್ಷ್ಮೀನಾರಾಯಣ ರಾವ್ ಅವರನ್ನು ಸನ್ಮಾನಿಸಲಾಯಿತು.

ರಂಗಭೂಮಿಯಲ್ಲಿ ಮಾನವೀಯತೆಯ ಸಂದೇಶ ಅಗತ್ಯ

ನಾಟಕಗಳು ಮನುಷ್ಯನ ದುರಾಸೆ, ಮಾನವೀಯ ಮೌಲ್ಯಗಳು ಹಾಗೂ ಬದುಕಿನ ಸತ್ಯಗಳನ್ನು ಪ್ರತಿಬಿಂಬಿಸುತ್ತವೆ. ಯುದ್ಧ ಮತ್ತು ಸಂಘರ್ಷಗಳ ಸಂದರ್ಭದಲ್ಲಿ ರಂಗಭೂಮಿ ಸಾರುವ ಮಾನವೀಯತೆಯ ಸಂದೇಶ ಹೆಚ್ಚು ಪ್ರಸ್ತುತವಾಗುತ್ತದೆ. ಸಾಮಾಜಿಕ ಸಂಘರ್ಷಗಳು, ಪ್ರಕೃತಿ ಮನುಷ್ಯನ ಸಂಬಂಧ ಹಾಗೂ ಸಮಾಜದ ಸಮಸ್ಯೆಗಳನ್ನು ರಂಗಕೃತಿಗಳ ಮೂಲಕ ಪರಿಣಾಮಕಾರಿಯಾಗಿ ಚರ್ಚಿಸಬೇಕು ಎಂದು ಲಕ್ಷ್ಮೀನಾರಾಯಣ ರಾವ್ ಹೇಳಿದರು.

ನಾಟಕ ಪ್ರದರ್ಶನ

ಶರಾವತಿ ಯೋಗ ಕುಟುಂಬ ತಂಡದಿಂದ ಶ್ರೀಧರ್‌ಆಚಾರ್ಯ ನಿರ್ದೇಶನದ 'ಅನ್ನದಾನ' ನಾಟಕ ಪ್ರದರ್ಶನಗೊಂಡಿತು. ದೂರವಾಣಿ ಕಾಲೋನಿಯ ಸ್ನೇಹಕೂಟ ಬಳಗದಿಂದ 'ಋಷಿ ಜೋಡಿ' ನಾಟಕ ಪ್ರದರ್ಶಿಸಲಾಯಿತು. ಹವ್ಯಾಸಿ ರಂಗತಂಡ ಕಲಾವಿದರು ಕಾರ್ಯಕ್ರಮ ನಿರ್ವಹಿಸಿದರು.

ಕೆನರಾ ಬ್ಯಾಂಕ್ Canara Bank
(A GOVERNMENT OF INDIA UNDERTAKING)

ಪ್ರಾದೇಶಿಕ ಕಛೇರಿ ಶಿವಮೊಗ್ಗ. ಮುಖ್ಯ ಕಛೇರಿ: ಬೆಂಗಳೂರು

ಚಿನ್ನದ ಹರಾಜು ಮಾರಾಟದ ಸೂಚನೆ

ಕೆಳಗೆ ವಿವರಗಳನ್ನು ನೀಡಲಾದ ಚಿನ್ನದ ಸಾಲದ ಖಾತೆಗಳಲ್ಲಿ ಬ್ಯಾಂಕ್‌ನಲ್ಲಿ ಅಡಮಾನವಿರಿಸಲಾದ ಆಭರಣಗಳ ಸಾರ್ವಜನಿಕ ಹರಾಜು ಮಾರಾಟವು, 05-11-2026 ರಂದು ಬೆಳಗ್ಗೆ 10 ಗಂಟೆಗೆ ಶಾಖೆಯ ಆವರಣದಲ್ಲಿ ನಡೆಯಲಿದೆ.

ಕ್ರ ಸಂ	ಶಾಖೆ ಹೆಸರು	ಗ್ರಾಹಕರ ಐಡಿ ಮತ್ತು ಖಾತೆ ನಂ.	ಹೆಸರು ಮತ್ತು ವಿಳಾಸ	ಮಂಜೂರಾತಿ ದಿನಾಂಕ	ಮಂಜೂರಾತಿ ಮೊತ್ತ (ರೂ.)	19-10-2026 ರಂತೆ ಸಾಲಗಾರರ ಒಟ್ಟು ಹೊಣೆಗಾರಿಕೆ (ರೂ)	ಒಟ್ಟು ತೂಕ (ಗ್ರಾಂಗಳು)	ಮೀಸಲು ಬೆಲೆ ರೂಗಳಲ್ಲಿ
1	ಭದ್ರಾವತಿ ಜನ್ನಾಪುರ (04837)	180437015669 80929123	ಗೋವಿಂದರಾಜು ಎನ್, ಬಿನ್ ನರಸಿಂಹ ಮೂರ್ತಿ, ಹೆಚ್.ನಂ. 31/1, 2ನೇ/3ನೇ ಕ್ರಾಸ್ (ಎಡಭಾಗ), ಹೊಸಸಿದ್ದಾಪುರ ರಸ್ತೆ, ಭದ್ರಾವತಿ, ಶಿವಮೊಗ್ಗ	06-10-2025	1,50,000	163134.94	20.50	ರೂ.2,75,000

ಮೇಲ್ಕಂಡ ಹರಾಜು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:
1. ಹರಾಜು "ಇದ್ದ ಸ್ಥಿತಿಯಲ್ಲಿಯೇ (As is Where is)" ನಡೆಸಲಾಗುತ್ತದೆ. 2. ಹರಾಜು ಸೂಚನೆಯಲ್ಲಿ ನಮೂದಿಸಿರುವ ಕನಿಷ್ಠ ಮೀಸಲು ಬೆಲೆ (Reserve Price) ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಬದಲಾಗಬಹುದು. 3. ಯಶಸ್ವಿ ಹರಾಜುದಾರರು ಸಂಪೂರ್ಣ ಹರಾಜು ಮೊತ್ತವನ್ನು ಒಮ್ಮೆಯೇ ಪಾವತಿಸಿ ಆಭರಣವನ್ನು ಪಡೆದುಕೊಳ್ಳಬೇಕು. ನಂತರ ಯಾವುದೇ ಕಾರಣಕ್ಕೂ ಬ್ಯಾಂಕ್‌ನಿಂದ ಹಣವನ್ನು ಮರುಪಾವತಿಸಲು ಹಕ್ಕು ಇರುವುದಿಲ್ಲ. 4.ಬ್ಯಾಂಕ್‌ಗೆ ಅಗತ್ಯವೆಂದು ಕಂಡಲ್ಲಿ ಯಾವುದೇ ಪೂರ್ವ ಸೂಚನೆ ನೀಡದೇ ಹರಾಜನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಮುಂದೂಡಲು, ನಿಲ್ಲಿಸಲು ಅಥವಾ ರದ್ದುಪಡಿಸಲು ಹಕ್ಕಿದೆ. 5. ಯಾವುದೇ ಕಾರಣ ನೀಡದೆ ಬ್ಯಾಂಕ್ ಯಾವುದೇ ಬಿಡ್ ಅನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಹೊಂದಿದೆ. 6.ಬ್ಯಾಂಕ್‌ನ ಅನುಕೂಲಕ್ಕಾಗಿ ಹರಾಜನ್ನು ಯಾವುದೇ ಹಂತದಲ್ಲಿ ಮುಂದೂಡಬಹುದು. ಇದಕ್ಕಾಗಿ ಯಾವುದೇ ವ್ಯಕ್ತಿಗೆ ಬ್ಯಾಂಕ್ ವಿರುದ್ಧ ದಾವೆ ಮಾಡುವ ಹಕ್ಕಿರುವುದಿಲ್ಲ. 7. ಯಶಸ್ವಿ ಹರಾಜುದಾರರು ಹರಾಜು ಮೊತ್ತವನ್ನು ಪಾವತಿಸದಿದ್ದರೆ ಅಥವಾ ಹರಾಜು ಪ್ರಕ್ರಿಯೆಗೆ ಅಡ್ಡಿಯಾಗುವಂತಹ ಯಾವುದೇ ಕಾರ್ಯ ಮಾಡಿದರೆ, ಬ್ಯಾಂಕ್‌ಗೆ ಉಂಟಾಗುವ ನಷ್ಟವನ್ನು ಅವರು ಭರಿಸಬೇಕಾಗುತ್ತದೆ. 8.ಯಾವುದೇ ಕಾರಣದಿಂದ ಹರಾಜು ವಿಫಲವಾದರೆ, ಬ್ಯಾಂಕ್ ಮತ್ತೊಮ್ಮೆ ಪತ್ರಿಕಾ ಪ್ರಕಟಣೆ ನೀಡಿ ಅಥವಾ ಅಗತ್ಯವೆಂದು ಕಂಡರೆ ಬೇರೆ ದಿನಾಂಕದಲ್ಲಿ ಹರಾಜು ನಡೆಸಬಹುದು. 9.ಯಶಸ್ವಿ ಹರಾಜುದಾರರು ದಿನಾಂಕ: 04-11-2026ರ ಸಂಜೆ 4.00ಗಂಟೆಯೊಳಗೆ ಹರಾಜಿನ ಮುಂದಿನ ಕೆಲಸದ ದಿನದೊಳಗೆ ಕನಿಷ್ಠ ಮುಂಗಡ ಪಾವತಿ ಮಾಡಬೇಕು. ಇಲ್ಲದಿದ್ದರೆ ಅವರ ಬಿಡ್ ರದ್ದುಗೊಂಡು, EMD (Earnest Money Deposit) ಮೊತ್ತವನ್ನು ಬ್ಯಾಂಕ್ ವಶಪಡಿಸಿಕೊಳ್ಳುತ್ತದೆ.

ದಿನಾಂಕ: 19-10-2026 ಸಹಿ/- ಶಾಖಾ ವ್ಯವಸ್ಥಾಪಕರು

बैंक ऑफ़ बड़ौदा Bank of Baroda
ಪ್ರಾದೇಶಿಕ ಕಛೇರಿ : ಶಿವಮೊಗ್ಗ

ಬಿ.ಹೆಚ್.ರಸ್ತೆ ಶಿವಮೊಗ್ಗ ಶಾಖೆ (7397)

ಮಲ್ಲಪ್ಪ ಕಾಂಪ್ಲೆಕ್ಸ್, ಬಿ.ಎಚ್. ರಸ್ತೆ, ಶಿವಮೊಗ್ಗ-577201.
ದೂರವಾಣಿ: + 08182-222653.
e-mail id: vjshbh@bankofbaroda.co.in

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ
ಅನುಬಂಧ- IV-A [ನಿಯಮ 6 (2) ಮತ್ತು ನಿಬಂಧನೆ 8 (6)]

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6)ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್)ರಿಗೆ ಅಡಮಾನವಾಗಿದ್ದು/ ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ **ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ** ಅವುಗಳನ್ನು ಆಧಾರದ । ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡತಿವೆ:

ಕ್ರ. ಸಂ	ಸಾಲಗಾರ/ರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಋಣಭಾರಗಳನ್ನು ಹೊಂದಿರುವ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆಯನ್ನು ನೀಡಿ, ಯಾವುದಾದರೂ ಇದ್ದರೆ (ಅಡಮಾನ ಇಟ್ಟವರು: ಶ್ರೀ ಕಿರಣ್‌ಆಚಾರ್ ಎಸ್.)	ಒಟ್ಟು ಬಾಕಿ	ಇ-ಹರಾಜಿನ ದಿನಾಂಕ ಮತ್ತು ಸಮಯ	1.ಆಸ್ತಿಯ ಮೀಸಲು ಬೆಲೆ 2.ಇಎಂಡಿ 3.ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ	ಆಸ್ತಿಯ ಸ್ವರೂಪ (ರನತ್ಮಕ / ಭೌತಿಕ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
01	ಸಾಲಗಾರರು: ಶ್ರೀ ಕಿರಣ್ ಆಚಾರ್ ಎಸ್, C/o ಸುರೇಶ್ ಎ. ಗುಡ್‌ಲಕ್ ಸರ್ಕಲ್, ಸ್ವಾಮಿ ವಿವೇಕಾನಂದ ಬಡಾವಣೆ, ಸಿ ಬ್ಲಾಕ್, ಗೋಪಾಳ ಬಡಾವಣೆ (ಅಂಚೆ) ಶಿವಮೊಗ್ಗ - 577205	ಈ ಆಸ್ತಿಯ ಎಲ್ಲಾ ಭಾಗವು ಮತ್ತು ಆಸ್ತಿಯ ಮನೆ ನಂ. ಎಲ್‌ಐಜಿ-44, ಖಾತಾ ನಂ.770/441, ಎಲ್‌ಐಜಿ-44, ಪಿಐಡಿ ನಂ.69543, ವಾರ್ಡ್ ನಂ.34, 2ನೇ ಹಂತ, ಕೆಹೆಚ್‌ಬಿ ಕಾಲೋನಿ, ಕಲ್ಲಹಳ್ಳಿ, ಶಿವಮೊಗ್ಗ ನಗರ. ಅಳತೆ ಪೂರ್ವದಿಂದ ಪಶ್ಚಿಮ: 13.00 ಮೀಟರ್ಸ್ ಮತ್ತು ಉತ್ತರದಿಂದ ದಕ್ಷಿಣ: 4.00 ಮೀಟರ್ಸ್ = 52.00 ಚದರ ಮೀಟರ್ಸ್ ಅಥವಾ 560 ಚದರಡಿ. ಚಕ್ಕುಬಂಧಿ:- ಪೂರ್ವ: ಮನೆ ನಂ.8 ಇಡಬ್ಲ್ಯೂಎಸ್, ಪಶ್ಚಿಮ: ರಸ್ತೆ, ಉತ್ತರ: ಎಲ್‌ಐಜಿ ಮನೆ ನಂ.43, ದಕ್ಷಿಣ: ಎಲ್‌ಐಜಿ ಮನೆ ನಂ.45.	ರೂಪಾಯಿಗಳು 29,15,784.57 19-10-2026 ರಂತೆ + ಹೆಚ್ಚುವರಿ ಬಡ್ಡಿ + ಶುಲ್ಕಗಳು ಮತ್ತು ವೆಚ್ಚಗಳು	30-11-2026 ಮಧ್ಯಾಹ್ನ 3.00 ರಿಂದ ಸಂಜೆ 4.00 ರವರೆಗೆ	1) ರೂ. 31,14,000/- 2) ರೂ. 3,11,400/- 3) ರೂ. 50,000/-	ಭೌತಿಕ ಸ್ವಾಧೀನ	16-11-2026 ರಿಂದ 26-11-2026 ರವರೆಗೆ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆ.

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction.htm ಹಾಗೂ https://baanknet.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ಆಸಕ್ತಿಯುಳ್ಳ ಬಿಡ್ದಾರರು. **ಅಧಿಕೃತ ಅಧಿಕಾರಿ 08182-222653 / 277611, ಮೊ: 7358892059.** ಗೆ ಸಹ ಕರೆ ಮಾಡಬಹುದು.

ಸ್ಥಳ: ಶಿವಮೊಗ್ಗ
ದಿನಾಂಕ: 19-10-2026

ಸಹಿ/- ಕುಳಂದೈವೇಲ್ ಆರ್.
ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ